**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,ಹೊಸದುರ್ಗ.**

ಅಸಲು ದಾವಾ ಸಂಖ್ಯೆ. **295/2019**
**ವಾ.ಸಾ-1**

ಸಾಕ್ಷಿಗೆ ದಿನಾಂಕಃ **23-8-2023** ರಂದು ಪ್ರಮಾಣ ವಚನ ಬೋಧಿಸಲಾಯಿತು.
ಮುಂದುವರೆದ ಪಾಟೀ ಸವಾಲು ಶ್ರೀ ಟಿ ಹೆಚ್ ಬಿ **1** ನೇ ಪ್ರತಿವಾದಿಯ ಪರ ವಕೀಲರಿಂದ

1. 1 ನೇ ಪ್ರತಿವಾದಿ ನನ್ನ ಅಣ್ಣ ಮತ್ತು 2 ನೇ ಪ್ರತಿವಾದಿ ನನ್ನ ತಮ್ಮ. ಹಿಂದಿನ ದಾವೆಯಲ್ಲಿ ನಾವು ನಮಗೂ ಕೂಡ ಪಾಲು ಇದೆ ಎಂದು ಪ್ರತಿವಾದ ಪತ್ರ ಸಲ್ಲಿಸಿರಲಿಲ್ಲ ಎಂದರೆ ಸರಿ.  ಸದರಿ ದಾವೆಯಲ್ಲಿ ನಮ್ಮ ಪರವಾಗಿ ವಕೀಲರು ಹಾಜರಾಗಿದ್ದರು ಎಂದರೆ ಸರಿ.

2. ನನ್ನ ತಂದೆ ಮೂಲ ಪುರುಷ ಬದುಕಿದ್ದಾಗಲೇ ಕುಟುಂಬದಲ್ಲಿ 1985 ರಲ್ಲಿ ವಿಭಾಗವಾಗಿದೆ ಎಂದರೆ ಸಾಕ್ಷಿಯು ನಾವು ಬೇರೆಆಗಿದ್ದೆವು ಆದರೆ ಜಮೀನಿನಲ್ಲಿ ವಿಭಾಗವಾಗಿರಲಿಲ್ಲ ಎಂದು ನುಡಿಯುವರು. ಸದರಿ ವಿಭಾಗದ ಕಾಲದಲ್ಲಿ ಹೆಣ್ಣು ಮಕ್ಕಳ ಮದುವೆಗೆ ಎಂದು ಜಮೀನನ್ನು ತೆಗೆದು ಇಟ್ಟಿದ್ದರು ಎಂದರೆ ಸರಿಯಲ್ಲ. ಸದರಿ ವಿಭಾಗದ ಕುರಿತು ಎಲ್ಲಾ ವಿಷಯ ಗೊತ್ತಿದ್ದರೂ ಕೂಡ 2 ನೇ ಪ್ರತಿವಾದಿಯ ಮಾತನ್ನು ಕೇಳಿ ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ.

3. ಹಿಂದಿನ ದಾವೆಯಲ್ಲಿ ಈಗಾಗಲೇ ಕುಟುಂಬದಲ್ಲಿ ವಿಭಾಗವಾಗಿದೆ ಎಂದು ಈ ದಾವೆಯ  2 ನೇ ಪ್ರತಿವಾದಿಯ ಪರವಾಗಿ ಸಾಕ್ಷ್ಯನುಡಿದಿದ್ದೇನೆ ಎಂದರೆ ಸರಿಯಲ್ಲ. ನಾನು ಈಗ ಚಿತ್ರದುರ್ಗದಲ್ಲಿ ವಾಸವಾಗಿದ್ದೇನೆ. ನನ್ನ ಗಂಡನ ಮನೆಯಲ್ಲಿ ವಾಸವಾಗಿದ್ದೇನೆ ಎಂದರೆ ಸರಿಯಲ್ಲ.

**ಅಸಲು ದಾವಾ ಸಂಖ್ಯೆ. 295/2019**
**ವಾ.ಸಾ-1**

4. ನನಗೆ ಸರ್ಕಾರದಿಂದ ವೃದ್ದಾಪ್ಯ ವೇತನ ಬರುತ್ತಿದೆ ಎಂದರೆ ಸರಿಯಲ್ಲ. ಮೂಲ ಪುರುಷನ ಕಾಲದಲ್ಲಿಯೇ ಕುಟುಂಬದಲ್ಲಿ ವಿಭಾಗವಾಗಿದ್ದು ನಾವುಗಳು ಬೇರೆ ಬೇರೆಯಾಗಿ ವಾಸ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಪಾಲು ಇಲ್ಲ ಎಂದರೆ ಸರಿಯಲ್ಲ. ಕುಟುಂಬದ ಆಸ್ತಿಗಳನ್ನು ಮಾರಾಟ ಮಾಡಿ 1 ನೇ ಪ್ರತಿವಾದಿಯು ನಮ್ಮ ಮದುವೆಯನ್ನು ಮಾಡಿದ್ದಾರೆ ಎಂದರೆ ಸರಿಯಲ್ಲ.

**3 ಮತ್ತು 4 ನೇ ಪ್ರತಿವಾದಿಯರು ಗೈರು ಹಾಜರಿದ್ದು ಯಾವುದೇ ಪ್ರತಿವಾದ ಪತ್ರ ಸಲ್ಲಿಸದೇ ಇರುವುದರಿಂದ ಸಾಕ್ಷಿಯ ಪಾಟೀ ಸವಾಲನ್ನು ಏನೂ ಇಲ್ಲ ಎಂದು ಪರಿಗಣಿಸಲಾಯಿತು.**

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಅದೆ. ನನ್ನ ಸಮಕ್ಷಮ

ಪ್ರಧಾನ ಸಿವ್ಹಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ನ್ಯಾಯಾಲಯ ಹೊಸದುರ್ಗ.